


**'ಸುಧಾ'ಕ್ಕೆ 'ಸುಧಾ'ನೇ ಸಾಟಿ!**

'ಮೂರ್ಖರ ದಿನಾಚರಣೆ'ಯ ನಗೆ ಸಂಚಿಕೆಯ ಪುಟ ಪುಟವೂ ತಂತಾನೇ ಓದಿಸಿಕೊಂಡು ಹೋಯಿತು. ಹಾಸ್ಯ ಸಂಚಿಕೆಯನ್ನು ಇಷ್ಟು ಗಂಭೀರವಾಗಿ ಯಾರೂ ಮಾಡುವುದಿಲ್ಲ! ಈ ವಿಷಯದಲ್ಲಿ 'ಸುಧಾ'ಕ್ಕೆ 'ಸುಧಾ'ನೇ ಸಾಟಿ. ಖ್ಯಾತ ಹಾಸ್ಯ ನಟರ, ಹಾಸ್ಯ ಲೇಖಕರ, ಕಾರ್ಟೂನಿಸ್ಟರ ಸಂದರ್ಶನ, ಝಲಕ್, ಹರಟೆಗಳು ಸಖತ್ತಾಗಿದ್ದವು, ಸಕಾಲಿಕವಾಗಿದ್ದವು. ಸಂಗ್ರಹಯೋಗ್ಯ ಸಂಚಿಕೆ.

ಈ ಸಂಚಿಕೆ 2012ರ ಏಪ್ರಿಲ್ 1 ರವರೆಗೂ ಓದಿ ಆನಂದಿಸುವಷ್ಟು ಚೆನ್ನಾಗಿದೆ!

-ಡಾ. ಕೆ.ಕೆ. ಜಯಚಂದ್ರಗುಪ್ತ- ಹಾಸನ, ವಿಭಾ ಮುರಳೀಧರ್- ತುಮಕೂರು, ಎಸ್.ಲಕ್ಷ್ಮೀನರಸಿಂಹ- ಚಾಮರಾಜನಗರ, ಪಿ.ಎಸ್.ಶ್ರೀವತ್ಸ, ಕೋಟೇಶ್ವರ ಸೂರ್ಯನಾರಾಯಣ ರಾವ್, ನೆ.ಲ.ರಾಂ, ಜಿ.ಕೆ.ಶ್ರೀಮತಿ- ಬೆಂಗಳೂರು, ಎಂ.ಎಲ್.ಲಕ್ಷ್ಮಣರಾವ್- ದಾವಣಗೆರೆ, ತರಂಗಿಣಿ- ತುಮಕೂರು, ಎಚ್.ಆನಂದಕುಮಾರ್- ಚಿತ್ರದುರ್ಗ, ನಾರಾಯಣ ಯಾಜಿ- ಶಿರಾಲಿ, ಕೊ.ಸು.ನರಸಿಂಹ ಮೂರ್ತಿ- ಮೈಸೂರು, ಕೊಹಿಮ- ಬಸರಕೋಡು, ಸು.ವಿಜಯಲಕ್ಷ್ಮಿ- ಶಿವಮೊಗ್ಗ, ಬಿ.ಎಸ್.ಸೊಲ್ಲಾಪುರೆ- ಕಮಲನಗರ, ಆರ್.ಎಲ್.ವಡ್ಡರ- ಮುದ್ದೇಬಿಹಾಳ, ರವೀಂದ್ರನಾಥ. ಶಿ. ಯಡಹಳ್ಳಿ- ಬೀಳಗಿ

**ಸಿಕ್ಕಾಪಟ್ಟೆ ಥ್ಯಾಂಕ್ಸ್**

ಮೂರು+ಕ್ಯಾ+ಲೆಂಡರ್=ಮೂವರು ಏನು ಕೊಡುವವರು?

ಮೂವರು=ಬಿಜೆಪಿ+ಜೆಡಿಎಸ್+ಕಾಂಗ್ರೆಸ್.

ಮೂರ್ಖ್ಯ+ಲೆಂಡರ್=ಇಂತಹ ಬುದ್ಧಿವಂತರು ಕೊಡುವವರೇ!

ನಾಲ್ಕನೇ ಚಿಂಪಾಂಜಿಯ ವಿಶೇಷತೆ- ಓದುಗರ ವಿವೇಚನೆಗೆ ಬಿಟ್ಟದ್ದು, ಮು.ಮಂ.ಗಳನ್ನು ಫೆವಿಕಾಲ್ ಮೇಲೆ ಕೂಡಿಸಿದ್ದು ಚಲೋ ಇತ್ತು.

ಜಾಹೀರಾ'ಥೂ' ಬಾಳ ಚಲೋ ಇದೆ. ನಕ್ಕೂ ನಕ್ಕೂ ಸಾಕಾಗಿದೆ. ನನಗೆ ವಿಶೇಷ ಅನಿಸಿದ್ದು- ಪನ್-ಡಿತರ ಪತ್ನಿಯರು, ಸಿಕ್ಕಾಪಟ್ಟೆ (ಭಯಂಕರ) ಥ್ಯಾಂಕ್ಸ್.

-ಬಳ್ಳಾರಿ ಮಧ್ವರಾಜ್, ಬೆಂಗಳೂರು

**ಕಳಕಳಿಯ ಎಳೆಗವನ**

ಎಳೆಯರ ಅಂಗಳದಲ್ಲಿ ಲಲಿತಾ. ಕೆ. ಹೊಸಪ್ಯಾಟಿಯವರ ಪದ್ಯ 'ಪುಟ್ಟನ ಸಾಹಸ' ಓದಿ ಬಹಳ ಸಂತೋಷವಾಯಿತು. ಕವಯತ್ರಿಯ ಸಾಮಾಜಿಕ ಕಳಕಳಿ ಸ್ತುತ್ಯರ್ಹವಾಗಿದೆ.

-ರಮೇಶ. ಶಿ. ಭಜಂತ್ರಿ, ರಾಂಪೂರ

**ವಿಶೇಷಾಂಕ ಜತೆ ಬಂಪರ್ ಕೊಡುಗೆ**

ಯುಗಾದಿಯ ವಿಶೇಷಾಂಕ ಜತೆಗೆ ನೀಡುವ ಉಚಿತ ಉಡುಗೊರೆಯನ್ನೇ ಕುತೂಹಲದಿಂದ ಕಾಯುವ ಓದುಗರಿಗೆ ಈ ಬಾರಿಯೂ ಬಂಪರ್ ಕೊಡುಗೆಯನ್ನೇ ನೀಡಲಾಗಿದೆ!

ಹೌದು, ಈ ಕೊಡುಗೆ ಕೇವಲ ವಿದ್ಯಾವಂತರಿಗೆ ಮಾತ್ರ ಮೀಸಲಾಗಿರದೆ ಜೀವನದಲ್ಲಿ ಸ್ವಾವಲಂಬನೆ ಗಳಿಸಬೇಕೆಂಬ ಪ್ರತಿಯೊಬ್ಬರಿಗೂ ಸಕಾಲಿಕ ಕೈಪಿಡಿ/ಕೈಮರವಾಗಿದೆ.

-ಚನ್ನಬಸವ ಪುತ್ತೂರ್ಕರ, ಚಿತ್ರದುರ್ಗ




**ಗಜಲ್‌ಗೆ ಶೀರ್ಷಿಕೆ ಇರುವುದಿಲ್ಲ**

'ಯುಗಾದಿ ವಿಶೇಷಾಂಕ'ದಲ್ಲಿ ನನ್ನ 'ಗಜಲ್'ನ್ನು ಹಾಕಿದ್ದೀರಿ. ಗಜಲ್‌ಗಳಿಗೆ ತಲೆಬರಹ (ಹೆಡ್ಡಿಂಗ್) ಇರುವುದಿಲ್ಲ. ಸುಮ್ಮನೆ ಗಜಲ್-1-2-3. ಈ ರೀತಿ ಗುರುತಿಸಲಾಗುತ್ತದೆ. ನಾನು ಆ ಕಾರಣಕ್ಕಾಗಿ ನನ್ನ ಗಜಲ್‌ಗೆ ತಲೆಬರಹವನ್ನು ಕೊಟ್ಟಿರಲಿಲ್ಲ. ಆದರೆ ನೀವು ಅದಕ್ಕೆ 'ಹೊಸ ವರುಷ ತಂದ ಹರುಷ' ಎಂದು ತಲೆಬರಹ ಕೊಟ್ಟಿದ್ದು ಸರಿಯಲ್ಲ.

-ಹೆಚ್.ಎಸ್. ಮುಕ್ತಾಯಕ್ಕ, ರಾಯಚೂರು

**ಸುಧಾ**

**ರಸಪ್ರಶ್ನೆ ಏಳನೆ ಡ್ರಾ (ಮಾರ್ಚ್ 3) ದ ಬಹುಮಾನ ವಿಜೇತರು**

1. ಕೆ.ಎಸ್. ಮಂಜುನಾಥ್, ದಾವಣಗೆರೆ
2. ಕಾರ್ತಿಕ್ ಕಮಲಾಕರ್, ಹೊಸಕೋಟೆ
3. ಹೂಗ್ ಮಿರಾಂಡ, ಸಾಗರ
4. ರಾಹುಲ್ ಸಂಜಯ್ ಕಾಕಡೆ, ಬೆಳಗಾವಿ
5. ಎನ್.ಕೆ. ಲಕ್ಷ್ಮೀನಾರಾಯಣರಾವ್, ಸಿಕಂದರಾಬಾದ್ (ಆಂಧ್ರಪ್ರದೇಶ)
6. ಬಿ.ಕೆ. ಜಯಕುಮಾರ್, ಬೆಂಗಳೂರು
7. ರಮ್ಯಾ ಹೆಗಡೆ, ಉಡುಪಿ
8. ಪ್ರಭಾಕರ ಎ.ಆರ್., ಮಂಡ್ಯ
9. ಮಹದೇವಸ್ವಾಮಿ, ನಂಜನಗೂಡು
10. ತ್ಯಾಗರಾಜ್ ಬಿ.ಎಂ. ಹಾಸನ




**ಬಿಳಿ ಮಚ್ಚೆಗಳೆ**

**ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.**

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.



**ಲೈಂಗಿಕ ಸಮಸ್ಯೆ**

**ಖಂಡಿತ ಗುಣವಾಗುವುದು**

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

**ಸ್ತ್ರೀ ರೋಗ**

ಬಿಳಿಸೆರಗು- ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

**ಆಕರ್ಷಕ ಸ್ತನಗಳಿಗೆ**



ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

**Asia Ayurved P.O. Katri Sarai (Gaya)**

**Phone: 0631-2224881**
**09934068051 / 09386023246**
**09934066680**